# ರಾಜಮನೆತನದ ನಂಟಿನ ವಿಂಡ್ಸರ್ ಕ್ಯಾಸಲ್



**ಬ್ರಿಟನ್‌ನ 'ವಿಂಡ್ಸರ್ ಕ್ಯಾಸಲ್' ಅರಮನೆಯ ಅಂಗಳದಲ್ಲಿ ನಡೆಯುವ 'ಗಾರ್ಡ್ ಚೇಂಜಿಂಗ್' ಕಾರ್ಯಕ್ರಮ ತನ್ನ ಶಿಸ್ತು ಹಾಗೂ ಸಮಯಬದ್ಧತೆಯ ಕಾರಣದಿಂದಾಗಿ ವಿಶ್ವಪ್ರಸಿದ್ಧಿ ಪಡೆದಿದೆ.**

**■ ಡಾ. ಕೆ.ಬಿ. ರಂಗಸ್ವಾಮಿ**

ಲಂಡನ್ ಮತ್ತು ಸ್ವಿಂಡನ್ ನಗರಗಳ ನಡುವೆ 'ವಿಂಡ್ಸರ್ ಕ್ಯಾಸಲ್' ಬ್ರಿಟನ್ ಪ್ರವಾಸ ಕೈಗೊಳ್ಳುವ ಪ್ರವಾಸಿಗರ ಪಾಲಿನ ಪ್ರಮುಖ ಆಕರ್ಷಣೆಗಳಲ್ಲೊಂದು. ಲಂಡನ್‌ಗೆ ಸಮೀಪದಲ್ಲಿರುವ ಈ ಪ್ರದೇಶದಲ್ಲಿ ಒಂದು ಬೃಹತ್ ಐತಿಹಾಸಿಕ ಅರಮನೆಯಿದೆ. ಇಂಗ್ಲೆಂಡ್‌ನ ಎರಡನೇ ಎಲಿಜಬೆತ್ ಮಹಾರಾಣಿ ವಾರಾಂತ್ಯದಲ್ಲಿ ಇಲ್ಲಿಗೆ ಬಂದು ತಂಗಿಹೋಗುವ ಪರಿಪಾಠವಿದೆಯಂತೆ. ರಾಜಮನೆತನದ ನಂಟಿನ ಕಾರಣದಿಂದಾಗಿ 'ವಿಂಡ್ಸರ್ ಕ್ಯಾಸಲ್'ಗೆ ವಿಶೇಷ ವರ್ಚಸ್ಸು.

ನಾವು ವಿಂಡ್ಸರ್‌ನ ನೆಲದ ಮೇಲೆ ಕಾಲಿಟ್ಟಾಗ ಗಡಿಯಾರದ ಮುಳ್ಳು ಬೆಳಗಿನ ಎಂಟರ ಸಮೀಪದಲ್ಲಿದ್ದಿತು. 'ಗಾರ್ಡ್ ಚೇಂಜಿಂಗ್' ಕಾರ್ಯಕ್ರಮ ಅಲ್ಲಿನ ವಿಶೇಷಗಳಲ್ಲೊಂದು. ಅರಮನೆಯ ನೌಕರರ ಪಾಳಿ ಬದಲಾವಣೆಯ ಆ ಕಾರ್ಯಕ್ರಮ, ರಾಜಮನೆತನದ ಆಚರಣೆಗಳ ಶಿಸ್ತನ್ನು ಒಳಗೊಳ್ಳುವ ಮೂಲಕ ಪ್ರಸಿದ್ಧಿ ಪಡೆದಿದೆ. ಆ ಕಾರ್ಯಕ್ರಮದ ವೀಕ್ಷಣೆಯ ಟಿಕೆಟುಗಳನ್ನು ಮುಂಗಡವಾಗಿ ಕಾಯ್ದಿರಿಸಿದ್ದರೂ ಕಾರ್ಯಕ್ರಮ ಮುಗಿಯುವ ಮುನ್ನವೇ ಆ ಸ್ಥಳಕ್ಕೆ ತಲುಪಬೇಕೆನ್ನುವ ತರಾತುರಿ ನಮ್ಮದಾಗಿತ್ತು.

ಅರಮನೆಯ ದ್ವಾರವನ್ನು ಪ್ರವೇಶಿಸಿದ ನಂತರ 'ಗಾರ್ಡ್ ಚೇಂಜಿಂಗ್' ನಡೆಯುವ ಸ್ಥಳಕ್ಕೆ ತಲುಪಲು ಸುಮಾರು ದೂರ ನಡೆಯಬೇಕಾಗಿದ್ದಿತು. ಮುಂಜಾನೆಯ ಬಿಸಿಲ ಝಳಕ್ಕೆ ನೆತ್ತಿ ಚುರುಗುಡತೊಡಗಿತ್ತು. ಕಾಲು ನೋವಿನಿಂದ ಬಳಲುತ್ತಿದ್ದ ನಮ್ಮ ಅತ್ತೆಯವರನ್ನು ಕರೆದುಕೊಂಡು ಅಲ್ಲಿಗೆ ತಲುಪುವಷ್ಟರಲ್ಲಿ ಆ ಕಾರ್ಯಕ್ರಮ ಇನ್ನೇನು ಮುಗಿಯುವ ಹಂತಕ್ಕೆ ಬಂದುಬಿಟ್ಟಿತ್ತು. ಸಿಕ್ಕಷ್ಟೇ ಸೀರುಂಡೆ ಎಂಬಂತೆ ಕಡೆಯ ಹಂತದ ಕಾರ್ಯಕ್ರಮವನ್ನು ಕಣ್ತುಂಬಿಸಿಕೊಂಡೆವು.

ಗಾಢ ಕೆಂಪು ವರ್ಣದ ಪೋಷಾಕಿನಲ್ಲಿ ಕಂಗೊಳಿಸುತ್ತಿದ್ದ ಬಂದೂಕುಧಾರಿ ಗಾರ್ಡ್‌ಗಳನ್ನು ನೋಡಲು ಎರಡು ಕಣ್ಣುಗಳು ಸಾಲವು. ಬ್ಯಾಂಡ್ ಸಂಗೀತದ ಹಿನ್ನೆಲೆಯೊಂದಿಗೆ ಸುಮಾರು ಅರ್ಧತಾಸು ನಡೆಯುವ ಈ ಕಾರ್ಯಕ್ರಮ ಮನಮೋಹಕ. ತಮ್ಮ ತಮ್ಮ ಕರ್ತವ್ಯ ಬದಲಾಯಿಸಿಕೊಂಡ ಶಿಸ್ತುಬದ್ಧ ಗಾರ್ಡ್‌ಗಳೆಲ್ಲರೂ ಅಲ್ಲಿಂದ ನಿರ್ಗಮಿಸುತ್ತಿದ್ದಂತೆ ವೀಕ್ಷಕರೂ ಅತ್ತಿತ್ತ ಚದುರತೊಡಗಿದರು.

ಅಲ್ಲೊಂದು ಕಡೆ ಬೊಂಬೆಯಂತೆ ನಿಶ್ಚಲನಾಗಿ, ನಿರ್ಭಾವುಕನಾಗಿ ನಿಂತಿದ್ದ ಕಾರ್ಯನಿರತ ಗಾರ್ಡ್‌ನೊಂದಿಗೆ ಕೆಲವರು ಮುಗಿಬಿದ್ದು ಫೋಟೋ ತೆಗೆಸಿಕೊಳ್ಳತೊಡಗಿದರು. ನಾವೂ ಕೂಡ ಒಬ್ಬೊಬ್ಬರಾಗಿ ನಿಂತು ಫೋಟೊ ತೆಗೆಸಿಕೊಂಡೆವು. ಕಿಂಚಿತ್ತೂ ಬೇಸರಿಸಿಕೊಳ್ಳದೆ ಸಹಕರಿಸುತ್ತಿದ್ದ ಆ ಗಾರ್ಡ್‌ನ ಸಹನೆಗೆ ಎಂಥವರಾದರೂ ಭೇಷ್ ಎನ್ನಲೇಬೇಕು.

ಗಾರ್ಡ್ ಚೇಂಜಿಂಗ್ ಕಾರ್ಯಕ್ರಮವನ್ನು ಕಣ್ತುಂಬಿಸಿಕೊಂಡ ನಾವು ಅರಮನೆ ವೀಕ್ಷಣೆಗೆ ತೆರಳಿದೆವು. ಅರಮನೆಯ ಒಳಾವರಣ ಪ್ರವಾಸಿಗರಿಂದ ತುಂಬಿತುಳುಕುತ್ತಿತ್ತು. ಹನ್ನೊಂದನೇ ಶತಮಾನದಲ್ಲಿ ನಿರ್ಮಿತವಾದ ಈ ಅರಮನೆ ತನ್ನ ಅದ್ಭುತ ವಾಸ್ತುವಿನ್ಯಾಸದಿಂದಲೂ ಸೌಂದರ್ಯದಿಂದಲೂ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಕೊಂಚ ಹಾನಿಗೊಳಗಾಗಿದ್ದ ಅರಮನೆಯ ಒಂದು ಪಾರ್ಶ್ವವನ್ನು ಇನ್ನಷ್ಟು ಸುಭದ್ರವಾಗಿ ಮರುನಿರ್ಮಿಸಲಾಗಿದೆ. ರಾಜರ ಶಯನಗೃಹ, ರಾಣಿಯರ ಶಯನಗೃಹ, ಪ್ರಸಾಧನಗೃಹ, ಹಜಾರ, ಭೋಜನಾಲಯ – ಹೀಗೆ ಅರಮನೆಯ ಪ್ರತಿ ಭಾಗವೂ ಒಂದೊಂದೂ ವಸ್ತು ಸಂಗ್ರಹಾಲಯದಂತೆ ಭಾಸವಾಗುತ್ತಿತ್ತು. ಪ್ರತಿಯೊಂದನ್ನೂ ವಿವರವಾಗಿ ವೀಕ್ಷಿಸಲು ಒಂದಿಡೀ ದಿನ ಸಾಲದೇನೋ? ಆದರೆ, ನಮ್ಮಂಥ ಪ್ರವಾಸಿಗರಿಗೆ ಅಷ್ಟೊಂದು ಸಾವಧಾನ ಎಲ್ಲಿಂದ ಬರಬೇಕು?

ಅರಮನೆಯ ಹೊರ ಆವರಣದಲ್ಲಿ ಇರುವ ಸಂತ ಜಾರ್ಜನ ಚಾಪೆಲ್ ಕೂಡ ನೋಡುಗರನ್ನು ಆಕರ್ಷಿಸುತ್ತದೆ. ಕಾಲವಶರಾದ ಹತ್ತು ದೊರೆಗಳ ಸಮಾಧಿಗಳನ್ನು ನಿರ್ಮಿಸಲಾಗಿದೆ. ಆ ಚಾಪೆಲ್ ಒಂದು ಪ್ರೇಕ್ಷಣೀಯ ಸ್ಥಳವಾಗಿ ಮಾರ್ಪಟ್ಟಿದೆ. ಒಳಗೆ ಪ್ರವೇಶಿಸುತ್ತಿದ್ದಂತೆ ಕಟ್ಟುನಿಟ್ಟಾಗಿ ಮೌನಕ್ಕೆ ಶರಣಾಗಬೇಕಾಗುತ್ತದೆ. ಒಟ್ಟಿನಲ್ಲಿ ವಿಂಡ್ಸರ್ ಅರಮನೆ ಮತ್ತು ಗಾರ್ಡ್ ಚೇಂಜಿಂಗ್ ಕಾರ್ಯಕ್ರಮದ ವೀಕ್ಷಣೆ ಬಹುಕಾಲ ನೆನಪಿನಲ್ಲುಳಿಯುವಂಥ ಒಂದು ಅವಿಸ್ಮರಣೀಯ ಅನುಭವ. ■